
# ಜ್ಞಾನಶಕ್ತಿ

ಮಾಸ ಪತ್ರಿಕೆ


JNANASHAKTHI


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 13 Reg. No. : KARBIL / 2005 / 16123 ನವಂಬರ್ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 11 ಪ್ರಕಟಣೆ : 5-11-2024


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಕೀರ್ತಿಶೇಷ ಶ್ರೀ ಲಕ್ಷ್ಮೀನಾರಾಯಣ ರಾವ್ ಇವರ ಪತ್ನಿ ಬೆಂಗಳೂರು ನಿವಾಸಿ ಶ್ರೀಮತಿ ಸುನಂದ ಲಕ್ಷ್ಮೀನಾರಾಯಣ ರಾವ್ ಇವರು ತನ್ನ ಅತ್ತೆ, ಮಾವ, ಕೀರ್ತಿಶೇಷ ಶ್ರೀಮತಿ ಸೀಮಂತಿ ರಾವ್ ಮತ್ತು ಕೀರ್ತಿಶೇಷ ಶ್ರೀ ಶಿವರಾವ್ ಕೊಂಬೆಟ್ಟು, ಪುತ್ತೂರು ಇವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ 'ಶಿವಸದನ'ಕ್ಕೆ ರೂ. **2,00,000/-** (ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಏರಿಕ್ಕಳ ಶ್ರೀ ಮಾಧವಯ್ಯ ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮಿ ಅಮ್ಮ ಅವರ ಸವಿನೆನಪಿಗಾಗಿ ಅವರ ಪುತ್ರ ಕೀರ್ತಿಶೇಷ ಶ್ರೀ ಸೂರ್ಯಪ್ರಕಾಶ್ ಇವರ ಪತ್ನಿ ಶ್ರೀಮತಿ ಶ್ಯಾಮಲಾ ಸೂರ್ಯಪ್ರಕಾಶ್ ಇವರು ತನ್ನ ಮಗ ಶ್ರೀ ಪ್ರಶಾಂತ್ ರಾವ್, ಸೊಸೆಯಂದಿರಾದ ಶ್ರೀಮತಿ ಸೌಮ್ಯ ನಿಶಾಂತ್ ರಾವ್, ಶ್ರೀಮತಿ ಗೀತಾ ರಾವ್ ಜತೆಗೂಡಿ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ 'ಶಿವಸದನ'ಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



## 'ನಾಡ ಹಬ್ಬ' ಯಕ್ಷಗಾನ 'ಏಕಾದಶಿ ಮಹಾತ್ಮೆ ಮತ್ತು ಶಮಂತಕ ಮಣಿ' ಪಾತ್ರವರ್ಗ







ದೇವೇಂದ್ರ : ಶ್ರೀ ವಲ್ಲೀಶ್, ಅಗ್ನಿ : ಶ್ರೀ ಶ್ರೀಹರಿ ಅದ್ಯಪಾಡಿ, ನಾಡಿ ಜಂಘ : CA ನಾಗರಾಜ್ ಶರ್ಮ, ಬಂಡಾಸುರ : ಶ್ರೀ ಪ್ರತೀಕ್ ಎಲ್ಲಂಗಳ, ವಿಷ್ಣು : ಶ್ರೀ ಅನ್ವೇಶ್, ಗರುಡ : ಕು। ವೈಭವಲಕ್ಷ್ಮೀ, ದೇವದೂತ : ಶ್ರೀ ಪಿ. ಶ್ರೀಕಾಂತ್ ರಾವ್, ಮುರಾಸುರ : ಶ್ರೀಮತಿ ಅರುಣಾ ಸೋಮಶೇಖರ್, ಶ್ರೀದೇವಿ : ಶ್ರೀಮತಿ ಶೈಲಜಾ ಶ್ರೀಕಾಂತ್, ಸಿಂಹ : ಉದಯ ಕುಮಾರ್ ಅಡೂರು, ಜಾಂಬವಂತ : ಶ್ರೀ ಸಂಜಯ್ ಕುಮಾರ್ ಪಿ., ಶ್ರೀಕೃಷ್ಣ : ನಂದಿತಾ ಎಸ್. ರಾವ್, ಜಾಂಬವತಿ : ಶ್ರೀ ರಘುವೀರ್ ಪೆರ್ಡೂರು, ಬಿಡಲಾಸುರ : ಶ್ರೀ ನಾಗರಾಜ್ ವಿಟ್ಲ; ನಿರ್ದೇಶನ : ಶ್ರೀ ಸಂಜಯ್ ಕುಮಾರ್ ಘಲಿಮಾರ್



ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ :
• ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ :
• ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.
ಗೌರವ ಸಲಹೆಗಾರರು :
• ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಹರ್ಷಕುಮಾರ್ ಕೇದಿಗೆ
7795116598 : 9343361618 e-mail : jnanashakthisss@gmail.com

## ವೇದಾಭಿಮಾನಿಗಳ ಅವಗಾಹನೆಗೆ


ಶ್ರೀ ಶೃಂಗೇರಿ ಶಿವಗಂಗಾ ಶಾರದಾಮಠದಲ್ಲಿ ನೂತನವಾಗಿ ಶ್ರೀ ಸಚ್ಚಿದಾನಂದಭಾರತೀ ವೇದ ಪಾಠಶಾಲಾ ಎಂಬ ನಾಮಾಂಕಿತದಿಂದ ಗುರುಕುಲವು ಆರಂಭವಾಗಿದ್ದು, ಶ್ರೀ ಪುರುಷೋತ್ತಮ ಭಾರತೀ ಸ್ವಾಮಿಗಳವರ ಅನುಗ್ರಹಾಶೀರ್ವಾದಗಳೊಂದಿಗೆ 15 ವರ್ಷ ಒಳಪಟ್ಟು ಉಪನೀತರಾದ ಬ್ರಾಹ್ಮಣ ವಟುಗಳಿಗೆ

**• ಋಗ್ವೇದ • ಕೃಷ್ಣಯಜುರ್ವೇದ • ಸಾಮವೇದ ಪ್ರಯೋಗ**

ಅಧ್ಯಯನಕ್ಕೆ ಅವಕಾಶವಿದ್ದು, ಬರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಊಟ, ವಸತಿ ಸೌಲಭ್ಯವಿದೆ. ಸಾಂಗವಾಗಿ ವೇದಾಧ್ಯಯನ ಮಾಡಿದವರಿಗೆ ಶ್ರೀಮಠದಿಂದ 4 ಲಕ್ಷ ರೂಪಾಯಿಗಳ ಗೌರವಧನ ಹಾಗೂ ನುರಿತ ಪ್ರಯೋಗಶೀಲ ವಿದ್ಯಾರ್ಥಿಗಳಿಗೆ 2 ಲಕ್ಷ ರೂಪಾಯಿಗಳ ಗೌರವಧನ ನೀಡಲಾಗುವುದು. ವೇದಾಧ್ಯಯನಾಸಕ್ತರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**
**ಪುನೀತ ಶರ್ಮ : 9663331674 / 9880248098** ಆಡಳಿತಾಧಿಕಾರಿಗಳು, ಶ್ರೀಮಠ, ಶಿವಗಂಗೆ

# ಒಂದು ಶತಕದ ಅನಂತರ ಕಾಶ್ಮೀರದಲ್ಲಿ ಶ್ರೀ ಶಾರದಾಂಬೆಯ ಪುನರ್‌ಪ್ರತಿಷ್ಠಾಪನೆ



**1. ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರಿಂದ ಶ್ರೀ ಶಾರದಾ ದೇವಿಯ ಪ್ರತಿಷ್ಠಾಪನೆ 2. ಗುರುದ್ವಾರ ಸಹಿತ ಟೀಟ್ವಾಲ್‌ನ ಶಾರದಾ ದೇವಾಲಯ 3. ಸರ್ವಜ್ಞಪೀಠ ಕಟ್ಟಡದ ಪಳೆಯುಳಿಕೆ**

ಭಾರತೀಯ ಸಂಸ್ಕೃತಿಯಲ್ಲಿ 'ವಿದ್ಯಾಧಿದೇವತೆ' ಎಂದೇ ಪರಿಗಣಿಸಲಾಗಿರುವ ಶಾರದಾದೇವಿಯ ವಾಸಸ್ಥಾನ 'ಕಾಶ್ಮೀರ' ಎಂದು ಪ್ರಾಚೀನ ಕಾಲದಿಂದಲೇ ಪ್ರಸಿದ್ಧಿಯಾಗಿದೆ. ಈ ವಿಷಯವನ್ನು ದೃಢೀಕರಿಸುವ ಮತ್ತು ನಾವು ಪ್ರತಿನಿತ್ಯ ಪಠಿಸುವಂತೆ ಸಂಸ್ಕೃತ ಭಾಷೆಯ ಶ್ಲೋಕವು ಹೀಗಿದೆ :

**ನಮಸ್ತೆ ಶಾರದಾದೇವಿ ಕಾಶ್ಮೀರ ಪುರವಾಸಿನಿ ।**
**ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾಂ ಬುದ್ಧಿಂಚ ದೇಹಿಮೇ ॥**

ಭಾರತದ ಮುಕುಟ 'ಕಾಶ್ಮೀರ'. ಕಾಶ್ಮೀರವಿಲ್ಲದ ಭಾರತ ಊಹೆಗೂ ನಿಲುಕದ್ದು. ಕಾಶ್ಮೀರ ಭಾರತೀಯ ಪರಂಪರೆಯ ಪ್ರತಿನಿಧಿಯೆಂದರೂ ತಪ್ಪಾಗಲಾರದು. ಕಾಶ್ಮೀರದಲ್ಲಿ ಭಾರತದ ಐತಿಹ್ಯಕ್ಕೆ ಸಂಬಂಧಿಸಿದಂತಹ ದೇವಾಲಯಗಳಿವೆ. ಇವುಗಳಲ್ಲಿ ಶಾರದಾಪೀಠ (ಸರ್ವಜ್ಞಪೀಠ) ದೇವಾಲಯವೂ ಒಂದು. (ಈಗ ಇದು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಇರುವುದು) ಶ್ರೀ ಶಾರದಾಪೀಠವಿರುವ ಸ್ಥಳವು ಕೇವಲ ಒಂದು ದೇವಸ್ಥಾನವಷ್ಟೇ ಆಗಿರಲಿಲ್ಲ. ಹಿಂದೆ ದೇಶ–ವಿದೇಶಗಳಿಂದ ವಿದ್ಯಾಭ್ಯಾಸವನ್ನು ಪಡೆಯಲು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಈಗಲೂ ಸಹ ಇದನ್ನು 'ಶಾರದಾ ಗ್ರಾಮ' ಎನ್ನುವರು.

ಸನಾತನ ಹಿಂದೂಧರ್ಮದ ಉದ್ಧಾರಕರು ಹಾಗೂ ಅದ್ವೈತ ಪ್ರತಿಪಾದಕರಾಗಿದ್ದ ಶಂಕರ ಭಗವತ್ಪಾದರು ಈ ಕ್ಷೇತ್ರಕ್ಕೆ ಹೋಗಿ ಅಲ್ಲಿನ ಉದ್ದಾಮ ಪಂಡಿತರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿ 'ಸರ್ವಜ್ಞಪೀಠ'ವನ್ನು ಅಲಂಕರಿಸಿದ್ದರೆಂಬುದನ್ನು ಶ್ರೀ ವಿದ್ಯಾರಣ್ಯರ 'ಶಂಕರ ದಿಗ್ವಿಜಯ' ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು ಸ್ಮರಿಸಬಹುದು. ಅಲ್ಲದೆ ಜಗತ್ತಿನ ಹಲವು ವಿಜ್ಞಾನಿಗಳು, ಗುರುಗಳು, ವಿದ್ವಾಂಸರು, ಸಾಧಕರು ತಮ್ಮ ಉನ್ನತ ಶಿಕ್ಷಣಕ್ಕಾಗಿ ಈ ಜ್ಞಾನಕ್ಷೇತ್ರದಲ್ಲಿ ನೆಲೆಸಿದ್ದರೆಂಬುದನ್ನು ಸಂಶೋಧನೆಗಳಲ್ಲಿ ತಿಳಿಸಲಾಗಿದೆ.

**ಸರ್ವಜ್ಞಪೀಠ ಏನಾಗಿದೆ? :** ಶ್ರೀ ಶಂಕರಾಚಾರ್ಯರು ದಿಗ್ವಿಜಯ ಸಾಧಿಸಿದ ಶಾರದಾ ಸರ್ವಜ್ಞಪೀಠವು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದೆ. ಈಗ ಇದರ ಪರಿಸ್ಥಿತಿ ಉತ್ತಮವಾಗಿಲ್ಲ. ದೇವಾಲಯ, ಗುಡಿಗೋಪುರ ಮತ್ತು ಶಾರದಾಂಬೆ ವಿಗ್ರಹವೂ ಇಲ್ಲದೆ ಕಲ್ಲಿನ ನಾಲ್ಕು ಗೋಡೆಗಳು ಮಾತ್ರ ಇದೆ.

**ಕಾಶ್ಮೀರ–ಶೃಂಗೇರಿ ಸಂಬಂಧ :** ಶೃಂಗೇರಿ ಮತ್ತು ಕಾಶ್ಮೀರಕ್ಕೂ 1200 ವರ್ಷಗಳ ಸಂಬಂಧ ಇರುವುದು. ಅದ್ವೈತ ಪ್ರತಿಪಾದಕ ಶ್ರೀ ಶಂಕರಾಚಾರ್ಯರು ಕಾಶ್ಮೀರದಲ್ಲಿದ್ದ ಶಾರದಾ ಸರ್ವಜ್ಞಪೀಠವನ್ನು ಆರೋಹಣ ಮಾಡಿದ ನಂತರ ಶ್ರೀ ಶಾರದಾಂಬೆ ವಿಗ್ರಹವನ್ನು ಶೃಂಗೇರಿಗೆ ತಂದು, ಶ್ರೀಚಕ್ರದ ಮೇಲೆ ಪ್ರತಿಷ್ಠಾಪಿಸಿದರು. ಆ ವಿಗ್ರಹವು ಶ್ರೀಗಂಧದಿಂದ ಕೆತ್ತಲ್ಪಟ್ಟಿತ್ತು. ನೂರಾರು ವರ್ಷಗಳ ನಂತರ ಆ ವಿಗ್ರಹವನ್ನು ಬದಲಾಯಿಸಿ ಬಂಗಾರ ಮಿಶ್ರಿತ ಪಂಚಲೋಹದ ಶ್ರೀ ಶಾರದಾಂಬೆಯ ವಿಗ್ರಹವನ್ನು ಜಗದ್ಗುರು ಶ್ರೀ ವಿದ್ಯಾರಣ್ಯರು ಪುನರ್ ಪ್ರತಿಷ್ಠಾಪಿಸಿದರು. ಈಗ ನಾವು ನೋಡುತ್ತಿರುವುದು ಇದೇ ವಿಗ್ರಹ. ಶ್ರೀಗಂಧದ ವಿಗ್ರಹವು ವಿದ್ಯಾಶಂಕರ ದೇವಾಲಯದ ಗರ್ಭಗುಡಿಯ ಮುಂದಿನ ಕೋಣೆಯಲ್ಲಿದ್ದು, ಪ್ರತಿದಿನ ಪೂಜೆ ನಡೆಯುವುದು. ಶೃಂಗೇರಿ ಶಾರದಾ ಪೀಠದ ಹಿಂದಿನ ಜಗದ್ಗುರುಗಳು ಹಾಗೂ ಕಾಶ್ಮೀರದ ರಾಜರುಗಳ ನಡುವೆ ನಡುವೆ ಗುರುಶಿಷ್ಯರ ಸಂಬಂಧ ಇತ್ತು. ಇದಕ್ಕೆ ಪೂರಕವಾಗಿ ಪತ್ರ ವ್ಯವಹಾರ ನಡೆಯುತ್ತಿದ್ದುದಕ್ಕೆ ಉಲ್ಲೇಖ, ದಾಖಲೆಗಳನ್ನು ಶ್ರೀಮಠದಲ್ಲಿ ಕಾಣಬಹುದು.

**ಟೀಟ್ವಾಲ್‌ನ ವಿಶೇಷತೆ :** ಕಂದಾಯ ದಾಖಲೆಗಳ ಪ್ರಕಾರ ಬೇಸ್ ಕ್ಯಾಂಪ್ ಮತ್ತು ಪಕ್ಕದ ಗುರುದ್ವಾರದ ಭೂಮಿಯ 6210 ಚದರ ಅಡಿಯಲ್ಲಿ x 3510 ಚದರ ಅಡಿಗಳಷ್ಟು ಪ್ರದೇಶದಲ್ಲಿ ಶಾರದಾ ದೇವಸ್ಥಾನ ಮಧ್ಯದಲ್ಲಿ ಗರ್ಭಗುಡಿ ಇದೆ. ಸಂಪರ್ಕ ರಸ್ತೆಯು ಮುಖ್ಯರಸ್ತೆಯಿಂದ 750 ಗಜಗಳಷ್ಟು ದೂರದಲ್ಲಿದೆ. 8 ಅಡಿ ಅಗಲವಿದೆ. ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸಲು ಇನ್ನೊಂದು ಬದಿಯಲ್ಲಿ ಸಂಪರ್ಕರಸ್ತೆ ನಿರ್ಮಿಸಲು ಕಂದಾಯ ಇಲಾಖೆಗೆ ಸೂಚಿಸಲಾಗಿದೆ.

**ಶಾರದಾ ರಥಯಾತ್ರೆ :** ಕಾಶ್ಮೀರದ ಟೀಟ್ವಾಲ್‌ನಲ್ಲಿ ನಿರ್ಮಾಣವಾದ ಶ್ರೀ ಶಾರದಾಂಬೆಯ ದೇವಾಲಯಕ್ಕೆ ದೇವಿಯು ರಥಯಾತ್ರೆಯ ಮೂಲಕ ಪ್ರಯಾಣ ಆರಂಭವಾಯಿತು. ಈ ರಥಯಾತ್ರೆಯು ದಿನಾಂಕ 24–1–2023ರಂದು ಶೃಂಗೇರಿಯಿಂದ ಆರಂಭವಾಗಿ ಬೆಂಗಳೂರು, ಪುಣೆ, ಮುಂಬೈ, ಚಂಡೀಗಢ, ದೆಹಲಿ ಮೂಲಕ ಶ್ರೀನಗರ ತಲುಪಿ, ನಂತರ ಕಾಶ್ಮೀರದ ಟೀಟ್ವಾಲ್‌ಅನ್ನು ಸೇರಿದೆ. ರಥಯಾತ್ರೆಯ ಸಲುವಾಗಿ ಹೊಸದಾದ ವಾಹವನ್ನು ಖರೀದಿಸಲಾಗಿದೆ.

**ಟೀಟ್ವಾಲ್ ದೇವಾಲಯ ಸ್ವರೂಪ :** ಟೀಟ್ವಾಲ್‌ನಲ್ಲಿ ನೂತನವಾಗಿ ನಿರ್ಮಿಸಿರುವ ದೇವಾಲಯವು ಪಿ.ಒ.ಕೆ.ನಲ್ಲಿದ್ದ ಪುರಾತನ ಶಾರದಾ ಸರ್ವಜ್ಞಪೀಠದ ದೇವಾಲಯದ ವಾಸ್ತುಶಿಲ್ಪದ ವೈಭವವನ್ನು ಹೋಲುವಂತಿರುವುದು. ಈ ದೇವಾಲಯ 4 ಬಾಗಿಲುಗಳನ್ನು ಹೊಂದಿರುತ್ತದೆ. ಮೂಲ ಸರ್ವಜ್ಞಪೀಠದ ದೇವಾಲಯವೂ ಸಹ ನಾಲ್ಕು ಬಾಗಿಲುಗಳನ್ನು ಹೊಂದಿತ್ತು. ನಾಲ್ಕು ಬಾಗಿಲಿನ ಮೇಲೆ ಮಹಾವಾಕ್ಯವಾದ **ಪ್ರಜ್ಞಾನಂ ಬ್ರಹ್ಮ, ತತ್ತ್ವಮಸಿ, ಅಯಮಾತ್ಮ ಬ್ರಹ್ಮ ಹಾಗೂ ಅಹಂ ಬ್ರಹ್ಮಾಸ್ಮಿ** ಎಂದು ಕೆತ್ತಲಾಗಿದೆ. ದೇವಾಲಯದ ಪಕ್ಕದಲ್ಲಿ ಗುರುದ್ವಾರವನ್ನೂ ಸಹ ನಿರ್ಮಿಸಲಾಗಿದೆ. ಶ್ರೀ ಶಾರದಾ ಮಾತೆಯ ವಿಗ್ರಹದ ಪ್ರತಿಷ್ಠಾಪನೆ ದಿನಾಂಕ 22–3–2023ರಂದು ಟೀಟ್ವಾಲ್‌ನಲ್ಲಿ ನೆರವೇರಿತು. *(ಸಶೇಷ) ಆಧಾರ : ಕಸ್ತೂರಿ ಮಾಸಪತ್ರಿಕೆ*

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ನಾಡಹಬ್ಬ' ಆಚರಣೆ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಸರಾ ನಾಡಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ಕಲ್ಯಾಣವೃಷ್ಟಿ ಸಮರ್ಪಣೆ, ಸರ್ವಮಂಗಳ ಮಾಂಗಲ್ಯೇ ಮತ್ತು ವಿವಿಧ ಪಾರಾಯಣಗಳು ನಡೆದವು. ಬಳಿಕ ಸುಗಮ ಸಂಗೀತ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ, ಹುಲಿ ಕುಣಿತ ಸ್ಪರ್ಧೆಗಳು ನಡೆದುವು. ಶ್ರೀ ಸಭಾದ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಕಾರ್ತಿಕ್ ಕುಡುಪು, ಶ್ರೀ ರವಿಶಂಕರ್ ರಾವ್, ಶ್ರೀಮತಿ ಸುಜಾತಾ ರಾವ್, ಶ್ರೀ ಲಕ್ಷ್ಮೀನಾರಾಯಣ ರಾವ್ ತೀರ್ಪುಗಾರರಾಗಿ ಸಹಕರಿಸಿದರು. ಬಳಿಕ ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ ವತಿಯಿಂದ ಪ್ರತಿಭಾ ಪುರಸ್ಕಾರ ನಡೆಯಿತು. ಭೋಜನ ಬಳಿಕ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ವತಿಯಿಂದ ಶ್ರೀ ಸಂಜಯ್ ಕುಮಾರ್ ಫಲಿಮಾರ್ ನಿರ್ದೇಶನದ **'ಶ್ರೀ ಏಕಾದಶಿ ಮಹಾತ್ಮೆ ಮತ್ತು ಶಮಂತಕ ಮಣಿ'** ಯಕ್ಷಗಾನ ಪ್ರದರ್ಶಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷರುಗಳಾದ ಡಾ. ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಯುವವೇದಿಕೆ ಕಾರ್ಯದರ್ಶಿ ಶ್ರೀ ಸಾಯಿಪ್ರಸಾದ್, ಮಹಿಳಾವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸ್ನೇಹಲತಾ ದಿವಾಕರ್ ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್ ವ್ಯವಸ್ಥೆಯಲ್ಲಿ ಸಹಕರಿಸಿದರು. ಬಹುಮಾನಗಳನ್ನು ಮಹಿಳಾವೇದಿಕೆ ಉಪಾಧ್ಯಕ್ಷೆ ಡಾ. ಜಯಲಕ್ಷ್ಮೀ ಪ್ರಾಯೋಜಿಸಿದರೆ, ಶ್ರೀ ಸಭಾದ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಕಾರ್ಯಕ್ರಮದ ವಿಡಿಯೋ–ಫೋಟೋಗಳನ್ನು ಒದಗಿಸಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕಡಬ ಧನ್ಯವಾದ ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.




ಶ್ರೀಮತಿ ಶ್ರೀದೇವಿ ಮತ್ತು ದಿ| ಜನಾರ್ದನ ಹೆಬ್ಬಾರ್ ಇವರ ಸುಪುತ್ರಿ **ಚಿ| ಸೌ| ಅನ್ನಪೂರ್ಣ ಹೆಬ್ಬಾರ್** ಇವರ ವಿವಾಹ ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀ ಶ್ರೀನಿವಾಸ ಇವರ ಸುಪುತ್ರ **ಚಿ| ಶ್ರೀಕರ** ಇವರೊಂದಿಗೆ ತಾ. 21–10–2024ನೇ ಸೋಮವಾರ ಬೆಂಗಳೂರಿನ 'ಜ್ಞಾನಶಕ್ತಿ ಮಂಟಪ'ದಲ್ಲಿ ನಡೆಯಿತು.

***

ಪಾದೆಬೆಟ್ಟು ಶ್ರೀ ಶಿವರಾಯ ರಾವ್ ಹಾಗೂ ಶ್ರೀಮತಿ ಭಾರತಿ ಇವರ ಸುಪುತ್ರ **ಚಿ| ಭರತ್** ಮತ್ತು ಶಿರಸಿ ಶ್ರೀ ಲಕ್ಷ್ಮೀಶ ಹೆಗಡೆ ಹಾಗೂ ಶ್ರೀಮತಿ ವಿಜಯ ಇವರ ಸುಪುತ್ರಿ **ಚಿ| ಸೌ| ಅಕ್ಷತಾ** ಇವರ ವಿವಾಹ ಶಿರಸಿಯ 'ರಾಘವೇಂದ್ರ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

***

ಶ್ರೀಮತಿ ಪದ್ಮಾವತಿ ಹಾಗೂ ಶ್ರೀ ಅನಂತಕೃಷ್ಣ ರಾವ್ ಇವರ ಸುಪುತ್ರಿ **ಚಿ| ಸೌ| ಹರ್ಷಿತಾ** ಇವರ ವಿವಾಹ ಶ್ರೀಮತಿ ದಾಕ್ಷಾಯಿಣಿ ಹಾಗೂ ಮಾರ್ಪಳ್ಳಿ ಶ್ರೀ ರಾಜಗೋಪಾಲ್ ರಾವ್ ಇವರ ಸುಪುತ್ರ **ಚಿ| ಸಂಪ್ರಿತ್** ಇವರೊಂದಿಗೆ ತಾ. 4–10–2024ನೇ ಶುಕ್ರವಾರ ಉಡುಪಿಯ 'ಶಾರದಾ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

***

ಮಾರ್ಪಳ್ಳಿ ಶ್ರೀ ಅರುಣ್ ಕುಮಾರ್ ಹಾಗೂ ಶ್ರೀಮತಿ ಶಾರದಾ ಇವರ ಸುಪುತ್ರಿ **ಚಿ| ಸೌ| ಹರ್ಷಿತಾ** ಇವರ ವಿವಾಹ ದಿ| ಕೆ. ಕೃಷ್ಣ ರಾವ್ ಹಾಗೂ ಶ್ರೀಮತಿ ಲಕ್ಷ್ಮೀ ಇವರ ಸುಪುತ್ರ **ಚಿ| ರಾಜಶೇಖರ** ಇವರೊಂದಿಗೆ ತಾ. 21–10–2024ನೇ ಸೋಮವಾರ ಪೆರ್ಡೂರ್‌ನ 'ಸುಬ್ರಾಯ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003
✆ : 9880968032 / 0824-2982095

**ಶಾಖೆಗಳು**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. 10,000/- ಠೇವಣಿ ಅವಧಿ : 88 ತಿಂಗಳು
ವಿಶೇಷ ಬಡ್ಡಿದರ : 9.6%






Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building Opp. Busstand
Nr. Postoffice, Padubidri - 574 111 Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ ವಾರ್ಷಿಕ ವರದಿ

ದಿನಾಂಕ 29–09–2024ನೇ ಭಾನುವಾರ 2023–24ನೇ ಸಾಲಿನ ವಾರ್ಷಿಕೋತ್ಸವ ಮತ್ತು ವಾರ್ಷಿಕ ಮಹಾಸಭೆಯು ಬೆಳಗ್ಗೆ ಗಂಟೆ 10–30ಕ್ಕೆ ವಿಟ್ಲದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಪ್ರಾರಂಭವಾಯಿತು. ಇದರ ಪ್ರಾರಂಭವನ್ನು ಸಮಾಜದ ವನಿತೆಯರು ದೀಪಪ್ರಜ್ವಲನಗೊಳಿಸುವ ಮೂಲಕ ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ನಾಗೇಶ್ ರಾವ್ ಮೊಡಂಕಾಪು ಇವರು ವಹಿಸಿರುತ್ತಾರೆ. ಕುಮಾರಿ ವಿದ್ಯಾಲಕ್ಷ್ಮಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಸ್ತಾವನೆಯನ್ನು ಸಭಾದ ಗೌರವ ಕಾರ್ಯದರ್ಶಿಯವರಾದ ಶ್ರೀ ಸಂತೋಷ್ ಕಾವಳಕಟ್ಟೆ ಅವರು ನೆರವೇರಿಸಿದ್ದು, ಸಮಾಜದ ಮಹಿಳೆಯರು ಮತ್ತು ಮಕ್ಕಳಿಂದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದೆ. ನಿರೂಪಣೆಯನ್ನು ಶ್ರೀ ಮುರಳೀಧರ ರಾವ್ ಮತ್ತು ಅವರ ಪತ್ನಿ ಶ್ರೀಮತಿ ರಾಜೇಶ್ವರಿ ಮುರಳೀಧರ ರಾವ್ ಅವರು ಜಂಟಿಯಾಗಿ ನೆರವೇರಿಸಿರುತ್ತಾರೆ.

ಮಧ್ಯಾಹ್ನ ಗಂಟೆ 2–30ಕ್ಕೆ ಸರಿಯಾಗಿ ಗಣ್ಯರ ಉಪಸ್ಥಿತಿಯಲ್ಲಿ ಮಹಾಸಭೆಯು ಶ್ರೀ ಕೃಷ್ಣಶರ್ಮ ಅನಾರು ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡು ಈ ಬಾರಿ ಮೂಡುಬಿದಿರೆ ಸಂಘದಿಂದ ವಿಶೇಷ ಪ್ರತಿನಿಧಿಯಾಗಿ ಶ್ರೀ ಚಂದ್ರಶೇಖರ್ ರಾವ್ ಬೊಕ್ಕಸ ಇವರು ದಂಪತಿಸಮೇತ ಆಗಮಿಸಿದ್ದರು. ಆಡಳಿತ ಮಂಡಳಿಯ ಅವಧಿ ಪೂರ್ಣಗೊಂಡ ಕಾರಣ ನೂತನ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿಯ ಸದಸ್ಯರ ನೇಮಕದ ಉಸ್ತುವಾರಿಯಾಗಿ ಶ್ರೀಯುತರಿಗೆ ಆಮಂತ್ರಣವನ್ನು ನೀಡಲಾಗಿತ್ತು.

ಶ್ರೀಮತಿ ಚೈತ್ರ ನಿಕ್ಷೇಪ್ ಇವರ ನಿರೂಪಣೆಯೊಂದಿಗೆ ಮಹಾಸಭೆ ಆರಂಭಗೊಂಡಿತು. ಶ್ರೀಮತಿ ಸೌಮ್ಯ ಇವರು ಅತಿಥಿಗಳನ್ನು ಆಸನ ಸ್ವೀಕಾರಕ್ಕೆ ಆಹ್ವಾನಿಸಿದರು. ಕುಮಾರಿ ಅರ್ಚನಾಳಿಂದ ಪ್ರಾರ್ಥನೆ ನೆರವೇರಿತು. ಬಳಿಕ ಗಣ್ಯ ಅತಿಥಿಗಳು ದೀಪ ಪ್ರಜ್ವಲನೆ ನಡೆಸಿ ಮಹಾಸಭೆಗೆ ಅಧಿಕೃತ ಚಾಲನೆಯನ್ನು ನೀಡಿದರು. ಮಹಾಸಭೆಯ ಪ್ರಸ್ತಾವನೆಯನ್ನು ಸಭಾ ಕಾರ್ಯದರ್ಶಿಯವರಾದ ಶ್ರೀ ಶ್ರೀಧರ ರಾವ್ ನೆಟ್ಲ ನೆರವೇರಿಸಿದರು. ವರದಿ ವರ್ಷದಲ್ಲಿ ಸಮಾಜದ ಬಾಂಧವರಿಗೆ ನಾರಾಯಣ ಸ್ಮರಣೆಯೊಂದಿಗೆ ಸಂತಾಪ ಸೂಚನೆಯನ್ನು ಶ್ರೀ ಸಂತೋಷ ರಾವ್ ಕಾವಳಕಟ್ಟೆ ನೆರವೇರಿಸಿರುತ್ತಾರೆ. 2023–24ನೇ ಸಾಲಿನ ಸಭಾದ ಕಾರ್ಯಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿ ಶ್ರೀ ಶ್ರೀಧರ ರಾವ್ ನೆಟ್ಲ ಇವರು ಸಭೆಗೆ ಓದಿ ತಿಳಿಸಿದರು. 2023–24ನೇ ಸಾಲಿನ ಲೆಕ್ಕಪತ್ರವನ್ನು ಶ್ರೀ ರಮೇಶ ರಾವ್ ವಗ್ಗ ಮಂಡನೆ ಮಾಡಿದ್ದು, ಸಭೆಯ ವರದಿ ಮತ್ತು ಲೆಕ್ಕಪತ್ರ ಮಂಡನೆಯನ್ನು ಮಾಡಿದರು. ಸಮಾಜದ ಗಣ್ಯರು ಸ್ಥಾಪಿಸಿರುವ ವಿವಿಧ ವಿದ್ಯಾನಿಧಿಗಳಿಂದ ಬಂದಿರುವಂತಹ ಬಡ್ಡಿಯ ಹಣವನ್ನು ವಿದ್ಯಾರ್ಥಿ ವೇತನ ಮೂಲಕ ವಿತರಿಸಲಾಗಿರುತ್ತದೆ. ಈ ಕಾರ್ಯಕ್ರಮವನ್ನು ವಿದ್ಯಾ ಸಮಿತಿಯ ಶ್ರೀಮತಿ ಶಾರದಾ ಸುಕುಮಾರ ರಾವ್ ಮತ್ತು ಶ್ರೀಮತಿ ಅರುಣಾ ಶಿವರಾಂ ರಾವ್ ನೆಟ್ಲ ಇವರು ನೆರವೇರಿಸಿದರು.

ಶೃಂಗೇರಿ ಶ್ರೀ ಜಗದ್ಗುರುಗಳವರಿಂದ ದೊರೆತ ಆಶೀರ್ವಾದ ರೂಪದ ಶ್ರೀಮುಖ ಮತ್ತು ಪ್ರಸಾದ ರೂಪದಲ್ಲಿ ನೀಡಿದ ಒಟ್ಟು ಮೂರು ಲಕ್ಷ ಕೊಡುಗೆಯ ಮಾಹಿತಿಯನ್ನು ಸಭೆಗೆ ನೀಡಿದರು.

ರಾಜ್ಯ ಮಟ್ಟದಲ್ಲಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿ 5ನೇ ರ್‍ಯಾಂಕ್ ಪಡೆದ ಬಹುಮುಖ ಪ್ರತಿಭೆ ಶ್ರೀ ಕಿಶೋರ್ ಕುಮಾರ್ ಕೇದಗೆ ಮತ್ತು ಶ್ರೀಮತಿ ಚಂದ್ರಿಕಾ ಇವರ ಸುಪುತ್ರಿ ಕು। ಕೆ. ಪಲ್ಲವಿಯನ್ನು ಅವರ ಅನುಪಸ್ಥಿತಿಯಲ್ಲಿ ಅವರ ಮಾತೃಶ್ರೀಯವರಾದ ಶ್ರೀಮತಿ ಚಂದ್ರಿಕಾ ಅವರನ್ನು ಗೌರವಿಸಿ ಸನ್ಮಾನಪತ್ರ ಮೂಲಕ ಸನ್ಮಾನಿಸಲಾಯಿತು.

ಸಭಾ ಹಾಗೂ ಪ್ರತಿಷ್ಠಾನದ ಅಭಿವೃದ್ಧಿಗಾಗಿ ಸಲಹೆ–ಸೂಚನೆಗಳನ್ನು ಪಡೆಯಲಾಗಿದ್ದು, ಅಧ್ಯಕ್ಷರು ತಮ್ಮ ನಿರ್ಗಮನ ಭಾಷಣದಲ್ಲಿ ಅರ್ಥಗರ್ಭಿತವಾಗಿ ಸಭೆಗೆ ಸಲಹೆ–ಸೂಚನೆಗಳನ್ನು ನೀಡಿದ್ದು, ನಿರಂತರ ಆರು ವರ್ಷಗಳ ಅಧ್ಯಕ್ಷ ಅವಧಿಯಲ್ಲಿ ನಡೆದ ಬೆಳವಣಿಗೆಗಳನ್ನು ತಿಳಿಸಿ ಆದಷ್ಟು ಬೇಗನೆ ಗುರುಮಂದಿರ ಹಾಗೂ ಸಭಾಭವನ ಪೂರ್ಣಗೊಳ್ಳುವ ಮೂಲಕ ಎಲ್ಲರೂ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡು ಬಂಟ್ವಾಳ ಸಂಘದ ಗೌರವವನ್ನು ಬೆಳಗಲು ಆಶೀರ್ವದಿಸಿದರು. ಮುಂದುವರಿದಂತೆ ಈ ಬಾರಿ ಯುವಕರಿಂದ ಪ್ರಾರಂಭವಾಗಲಿರುವ ಕ್ರೀಡೋತ್ಸವವು ಅದ್ದೂರಿಯಾಗಿ ಮತ್ತು ಯಶಸ್ವಿಯಾಗಿ ನೆರವೇರಲು ಎಲ್ಲರೂ ಸಹಕಾರ ನೀಡುವಂತೆಯೂ ಕರೆ ನೀಡಿದರು. ಸಂಘದ ಸದಸ್ಯತ್ವವನ್ನು ಹೆಚ್ಚಿಸುವಂತೆ ಮತ್ತು ಭಜನಾಪದ್ಧತಿಯನ್ನು ವಲಯವಾರು ಪುನಃ ಪ್ರಾರಂಭಿಸಲು ಸಲಹೆ ನೀಡಿರುತ್ತಾರೆ. ಧನ್ಯವಾದ ಸಮರ್ಪಣಾ ಕಾರ್ಯಕ್ರಮವನ್ನು ಶ್ರೀಮತಿ ಅರುಣಾ ಶಿವರಾಮ್ ರಾವ್ ನೆರವೇರಿಸಿದರು. ವೇದಿಕೆ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಶ್ರೀ ಶಿವರಾಂ ರಾವ್ ಬೈರಿಕಟ್ಟೆ, ಶ್ರೀ ಅನಂತ ಪ್ರಸಾದ್ ವಿಟ್ಲ, ಶ್ರೀ ಹರಿಪ್ರಸಾದ್ ವಿಟ್ಲ ಇವರಿಗೆ ಧನ್ಯವಾದವನ್ನು ಸಮರ್ಪಿಸಲಾಯಿತು. ಚುನಾವಣೆ ವೀಕ್ಷಕರಾಗಿ ಆಗಮಿಸಿದ ಶ್ರೀ ಚಂದ್ರಶೇಖರ್ ರಾವ್ ಅವರನ್ನು ದಂಪತಿಸಮೇತ ಶಾಲು ಹೊದಿಸಿ ಗೌರವಿಸಿ ಧನ್ಯವಾದ ಸಮರ್ಪಿಸಲಾಯಿತು.




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 20–10–2024ರಂದು ನಡೆದ 'ನಾಡಹಬ್ಬ' ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸ್ಥಾನಿಕ ಬ್ರಾಹ್ಮಣ ಸಮಾಜದ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ವತಿಯಿಂದ ಶ್ರೀ ಕೆ. ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ದಂಪತಿಗಳು ಸನ್ಮಾನಿಸಿದರು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***





**PREETHIKA AUTOMOBILES**
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils
✆ 2493633
9845851573

Prop: Somashekhar
Mob: 9844551244
**WONDER CREATION**
Decor & Event planners
Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

# ಅನುಗ್ರಹ ಸಂದೇಶ

ಶಾಸ್ತ್ರಗಳು ಮಾನವನ ಶ್ರೇಯಸ್ಸಿಗಾಗಿ ಇರುತ್ತವೆ. ಮನುಷ್ಯರ ಸುಖ–ಸಂತೋಷಕ್ಕೆ ಅವರು ಆಚರಿಸುವ ಕರ್ಮವೇ ಕಾರಣವಾಗಿರುತ್ತವೆ ಎಂದು ಶಾಸ್ತ್ರಗಳು ಸ್ಪಷ್ಟವಾಗಿ ತಿಳಿಸುತ್ತವೆ.

***ಸುಖಸ್ಯ ದುಃಖಸ್ಯ ನ ಕೋಪಿ ದಾತಾ ಪರೋ ದದಾತೀತಿ ಕುಬುದ್ಧಿರೇಷಾ ।***
***ಅಹಂ ಕರೋಮೀತಿ ವೃಥಾಭಿಮಾನಃ ಸ್ವಕರ್ಮ–ಸೂತ್ರ–ಗ್ರಥಿತೋ ಹಿ ಲೋಕಃ ।***

ಮನುಷ್ಯನ ಸುಖ–ಸಂತೋಷಗಳಿಗೆ ಇನ್ನೊಬ್ಬ ವ್ಯಕ್ತಿಯು ಕಾರಣನಾಗುವುದಿಲ್ಲ. ಅವನು ಮಾಡಿದ ಕರ್ಮಗಳೇ ಫಲವನ್ನು ನೀಡುತ್ತವೆ. ಅನ್ಯರಿಂದ ಅವು ಸಂಭವಿಸುತ್ತವೆ ಎಂದುಕೊಳ್ಳುವುದು ತಪ್ಪು ಗ್ರಹಿಕೆಯಾಗುತ್ತದೆ. ವ್ಯಕ್ತಿಯೊಬ್ಬನ ವೈಯುಕ್ತಿಕ ಜೀವನವು ಅವನು ಆಚರಿಸಿದ ಕರ್ಮಗಳಿಂದಲೇ ನಿರ್ಮಿತವಾಗುತ್ತದೆ.

ಜೀವನವು ಸುಖಮಯವಾಗಿದೆ ಎಂದರೆ, ಅದಕ್ಕೆ ಆಚರಿಸಿದ ಸತ್ಕರ್ಮಗಳು ಕಾರಣ ಎಂದು ಸಿದ್ಧವಾಗುತ್ತದೆ. ಈಗಿನ ಜೀವನದ ಸ್ಥಿತಿಗತಿಗಳು ಹಿಂದಿನ ಕರ್ಮಗಳ ಫಲ ಎನ್ನುವುದಾದರೆ, ಭವಿಷ್ಯದಲ್ಲಿ ಸಂಭವಿಸಬಹುದಾದ ಫಲಾಫಲಗಳು ವರ್ತಮಾನಕಾಲದಲ್ಲಿ ಆಚರಿಸುವ ನಡೆ–ನುಡಿಗಳಿಗೆ ಅನುಸಾರವಾಗಿ ಇರುತ್ತವೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಆದುದರಿಂದಲೇ, ನಮ್ಮ ಶಾಸ್ತ್ರಗಳು 'ಭವಿಷ್ಯದಲ್ಲಿ ಒಳ್ಳೆಯ ಫಲಗಳು ದೊರಕಬೇಕಾದರೆ ಈಗ ಸದ್ವಿಚಾರ, ಸದಾಚಾರಗಳಲ್ಲಿ ನಿರತರಾಗಬೇಕು' ಎಂದು ತಿಳಿಸುತ್ತವೆ. ಅಂದರೆ, ಮನುಷ್ಯನು ಆಚರಿಸುವ ಕರ್ಮವೇ ಅವರ ಪ್ರಾರಬ್ಧವನ್ನು ನಿಶ್ಚಯಿಸುತ್ತವೆ ಎಂದಂತಾಯಿತು. ಮನುಷ್ಯರ ನಡುವಿನ ವ್ಯತ್ಯಾಸಗಳಿಗೆ ಇದೇ ಕಾರಣವೆಂದು ನ್ಯಾಯಯುತವಾಗಿ ಹೇಳಬಹುದು. ಸುತ್ತಲೂ ಇರುವ ಪರಿಸರಗಳು ಮತ್ತು ಮನುಷ್ಯರ ವಿವಿಧ ಅನುಭವಗಳಿಗೂ ಇದೇ ಕಾರಣವೆಂದು ಹೇಳಬಹುದು. ಶಾಸ್ತ್ರಗಳು ಅನೇಕ ಉದಾಹರಣೆಗಳ ಮೂಲಕ ಇದನ್ನು ದೃಢಪಡಿಸುತ್ತವೆ.

***ಸುಖ–ದುಃಖ–ಪ್ರದೋ ಪುರುಷಸ್ಯಾತ್ಮ–ವಿಭ್ರಮಃ ।***
***ಮಿತ್ರೋದಾಸೀನ–ರಿಪವಃ ಸಂಸಾರಸ್ತಮಸಃ ಕೃತಃ ॥***

ಸಂಸಾರದಲ್ಲಿನ ಸುಖ–ದುಃಖಗಳು ಶತ್ರು–ಮಿತ್ರರು ಹಾಗೂ ತಟಸ್ಥರಾದವರನ್ನು ಕುರಿತು ಮನಸ್ಸು ಕೈಗೊಳ್ಳುವ ತಪ್ಪು ತಿಳುವಳಿಕೆಗಳಿಂದ ಉಂಟಾಗುತ್ತದೆ. ಇವು ಕೇವಲ ಅಜ್ಞಾನದಿಂದ ಸಂಭವಿಸುತ್ತದೆ. ಕಷ್ಟ–ಸುಖಗಳಿಗೆ ಬಾಹ್ಯಸಂಗತಿಗಳು ಕಾರಣ ಆಗುವುದಿಲ್ಲ. ಪ್ರತಿಯೊಬ್ಬರ ಕರ್ಮಫಲಗಳೇ ಅವುಗಳಿಗೆ ಕಾರಣವಾಗುತ್ತವೆ.

***ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ ।***
***ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥***

ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಅಂದರೆ, ಮೃತಶರೀರವನ್ನು ಕಾಷ್ಠ ಅಥವಾ ಮಣ್ಣು ಎಂದು ತಿರಸ್ಕರಿಸಿ ಬಂಧುವರ್ಗದವರು ತ್ಯಜಿಸಿ ಹೊರಟುಹೋಗುತ್ತಾರೆ. ಅಂದರೆ, ಮೃತವ್ಯಕ್ತಿಯು ಆಚರಿಸಿದ್ದ ಧರ್ಮಾಧರ್ಮಗಳು ಅವನನ್ನು ಹಿಂಬಾಲಿಸುತ್ತವೆ.

ಆದ್ದರಿಂದ ಸುಖ–ಶಾಂತಿಯಿಂದ ಜೀವಿಸಲು ಧರ್ಮಕಾರ್ಯಗಳನ್ನು ನೆರವೇರಿಸಲು ನಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಬೇಕು.

***ಕನ್ನಡ ಅನುವಾದ : ಶ್ರೀ ಜಿ. ವಿಜಯ ಕುಮಾರ್***
ಮೊಬೈಲ್ : 9448114410

# ಪ್ರಕಟಣೆ

'ಶಿವಸದನ' ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿ ನಿಲಯದ ಹಿರಿಯ ನಾಗರಿಕರ ವಸತಿ ನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಪುತ್ತೂರಿನ ಆಸುಪಾಸಿನ ಮಕ್ಕಳ ದಾಖಲಾತಿ ತಾರೀಕು 1–6–2024ರಿಂದ ಆರಂಭವಾಗಿದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ. ಮಿತ ದರದಲ್ಲಿ ಸುಸಜ್ಜಿತ ಶಾಲೆಯಲ್ಲಿ ಪರಿಣಿತರಿಂದ ಸೇವೆ, ಆರೈಕೆ, ಆಟ ಪಾಠವನ್ನು ಒದಗಿಸಲಾಗುವುದು. ಆವಶ್ಯಕತೆ ಇರುವವವರು ಮಾಹಿತಿ ಪಡೆಯಲು ವಿನಂತಿ. ನಿವಾಸಿ ಸೌಲಭ್ಯವೂ ಲಭ್ಯವಿದೆ.

**ಹೆಚ್ಚಿನ ಮಾಹಿತಿ :** *ಶ್ರೀ ಕರುಣ್ ರಾವ್ ಬೆಳ್ಳೆ – 7337634359*
*ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442*
*ಶ್ರೀ ಪಿ. ಶ್ರೀಕಾಂತ್ ರಾವ್ – 7795116598*

**ಟೀಕಾಕಾರರಿಂದಲೇ ಬೆಳೆಯಿರಿ**

**'ನಮ್ಮ ಮೇಲೆ ಎಸೆಯುವ ಕಲ್ಲುಗಳಿಂದ ಸ್ಮಾರಕವನ್ನು ನಿರ್ಮಿಸುವಂತೆ ನಾವು ಬೆಳೆದುಬಿಡಬೇಕು'. ಟೀಕಿಸಿದರೆ ನೋಯುವ ಅಗತ್ಯವಿಲ್ಲ, ಅದನ್ನೇ ನಮ್ಮ ಬೆಳವಣಿಗೆಯ ಸೋಪಾನವಾಗಿಸಿಕೊಳ್ಳಬೇಕು.**

ಪತ್ರಿಕೆಗೆ ಶುಭ ಬಯಸುವ–
**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

Celebrating 60th Year 1963-2023
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

*Prop. : P. Srikanth Rao* Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4




**ರಾಮಾ ಆಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ




ನಂದಿಕೂರು ನಿವಾಸಿ ಸಾಂತೂರು ಶ್ರೀ ಜನಾರ್ಧನ್ ರಾವ್ ಮತ್ತು ಪತ್ನಿ ಶ್ರೀಮತಿ ಶುಭಾ ಜನಾರ್ಧನ್ ರಾವ್ ದಂಪತಿಗಳು, ಬೆಂಗಳೂರು ನಿವಾಸಿ ಶ್ರೀ ಶಶಿಶೇಖರ್ ರಾವ್ ಮತ್ತು ಶ್ರೀಮತಿ ಮಂಜುಳ ರಾವ್ ದಂಪತಿಗಳು ಪುತ್ತೂರು ಶಿವಸದನದ ಹಿರಿಯರು ಹಾಗೂ ವಿಶೇಷ ಚೇತನರು, ಸಿಬ್ಬಂದಿ ವರ್ಗದವರಿಗೆ ವಿಶೇಷ ಭೋಜನವನ್ನು ಪ್ರಾಯೋಜಿಸಿದ್ದರು. ಅದರೊಂದಿಗೆ ಅವರಿಗೆ ವಿವಿಧ ರೀತಿಯ ಆಟಗಳು, ಹೆಣ್ಣಿನ ಫೋಟೋದ ಹಣೆಗೆ ಬಿಂದಿ ಅಂಟಿಸುವುದು, ಸಂಗೀತ, ಭಜನೆ, ನೃತ್ಯ, ಅಂತ್ಯಾಕ್ಷರಿ, ಒಗಟುಗಳು, ಗಾದೆಮಾತುಗಳು ಮುಂತಾದ ಮನರಂಜನಾ ಆಟಗಳನ್ನು ಆಡಿಸಿದ್ದು, ಪ್ರತಿಯೊಬ್ಬರು ಸಂತೋಷಪಟ್ಟರು. ಇವರಿಬ್ಬರೂ ಶಿವಸದನ ನಿರ್ಮಾಣಕ್ಕೆ ದೊಡ್ಡ ಮೊತ್ತದ ದೇಣಿಗೆ ಸಹ ನೀಡಿರುತ್ತಾರೆ. ಇವರಿಗೆ ಶಿವಸದನದ ಹಿರಿಯರನ್ನೆಲ್ಲ ನೋಡಿ ಮಾತನಾಡಿ ಅವರೊಂದಿಗೆ ಪ್ರೀತಿಯಿಂದ ಬೆರೆಯುವ ಹಾಗೂ ಅವರೊಂದಿಗೆ ಆಟವಾಡಿ ಭೋಜನ ಸವಿಯುವ ಇರಾದೆಯಿಂದ ಬಂದಿದ್ದು, ಸಂತೋಷದಿಂದ ಸಮಯ ಕಳೆದದ್ದೇ ತಿಳಿಯಲಿಲ್ಲ. ಹಿರಿಯರೆಲ್ಲರ ಆಶೀರ್ವಾದ ಅವರೆಲ್ಲರ ಮೇಲೆ ಇರಲಿ. ಅವರೊಂದಿಗೆ ಸಹೋದರಿಯರು, ಆತ್ಮೀಯ ಬಂಧುಗಳು, ಶ್ರೀ ಕರುಣ್ ಬೆಳ್ಳೆ, ಸಿಬ್ಬಂದಿ ವರ್ಗ, ಎಲ್ಲರೂ ಭೋಜನ ಬಡಿಸಲು ಸಹಕರಿಸಿದರು.

ಹಿರಿಯರೊಂದಿಗೆ ಸಮಯ ಕಳೆದರೆ ಜ್ಞಾನ ಮತ್ತು ಮೌಲ್ಯಗಳನ್ನು ಹಂಚಿಕೊಳ್ಳುವ ಅವಕಾಶವನ್ನು ಹೊಂದುತ್ತೇವೆ. ಇಂದು ಹಿರಿಯರೊಂದಿಗೆ ಸಮಯವನ್ನು ಕಳೆದ ಎಲ್ಲರಿಗೂ ಶ್ರೀ ದೇವರು ಉತ್ತಮ ಆರೋಗ್ಯ ಹಾಗೂ ಸಮೃದ್ಧಿಯನ್ನು ನೀಡಲಿ ಎಂದು ಎಲ್ಲರ ಹಾರೈಕೆ.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

---

ನಾಸಿಕ್ ನಿವಾಸಿ ಕಳತ್ತೂರು ಶ್ರೀನಿವಾಸ ರಾವ್ ಶಾನ್‌ಭಾಗ್ ಇವರ ಪತ್ನಿ ಶ್ರೀಮತಿ ಕೆ. ವೇದಾವತಿ ಶ್ರೀನಿವಾಸ್ ಶಾನ್‌ಭಾಗ್ ಅವರ ಸ್ಮರಣಾರ್ಥ ಪುತ್ತೂರಿನ 'ಶಿವಸದನ'ದಲ್ಲಿ ವಿಶೇಷ ಭೋಜನವನ್ನು ಮಗಳು ಶ್ರೀಮತಿ ಶಾಂತ ನಿರಂಜನ್ ಇವರು ಪ್ರಾಯೋಜಿಸಿದ್ದಾರೆ. ಎಲ್ಲರೊಂದಿಗೆ ಭೋಜನ ಸವಿದ ಹಿರಿಯರು ಶ್ರೀಮತಿ ಶಾಂತ ನಿರಂಜನ್ ಹಾಗೂ ಅವರ ಕುಟುಂಬದವರಿಗೆಲ್ಲ ಶ್ರೇಯಸ್ಸನ್ನು ಹಾರೈಸಿದ್ದಾರೆ.

---

ಹೋಟೆಲ್ ಸ್ವಾಗತ ಇದರ ಮ್ಹಾಲಕರಾದ ಶ್ರೀ ಶ್ರೀಪತಿ ರಾವ್ ಹಾಗೂ ಶ್ರೀಮತಿ ಹರಿಣಿ ರಾವ್ ಶಿವಸದನದ ಹಿರಿಯರಿಗೆ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನವನ್ನು ಪ್ರಾಯೋಜಿಸಿದ್ದರು. ಕೊಡುಗೈ ದಾನಿಯಾದ ಇವರಿಗೆ ದೇವರು ಆಯುಷ್ಯ, ಆರೋಗ್ಯ, ಸಂಪತ್ತು, ನೆಮ್ಮದಿ ನೀಡಲಿ ಎಂದು ಹಿರಿಯರ ಹಾರೈಕೆ.


# ಭಕ್ತಿ ಸಂಗೀತ ಕಾರ್ಯಕ್ರಮ



ಉಡುಪಿಯ ಬೈಲೂರು ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ನಡೆಯುವ ಶರನ್ನವರಾತ್ರಿ ಮಹೋತ್ಸವದ ಸಂದರ್ಭದಲ್ಲಿ ಆಯೋಜಿಸುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಾಸರಗೋಡಿನ ಶ್ರೀಮತಿ ವಿದುಷಿ ರಾಧಾ ಮುರಳೀಧರ ಹಾಗೂ ಪುತ್ತೂರಿನ ಡಾ. ಶೋಭಿತಾ ಸತೀಶ್ ಮತ್ತು ಬಳಗದವರು ಭಕ್ತಿ ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ 'ನಾಡಹಬ್ಬ' ಕಾರ್ಯಕ್ರಮದ ಸ್ಪರ್ಧಾ ವಿಜೇತರು

● **ಸುಗಮ ಸಂಗೀತ : 5ರಿಂದ 15 ವರ್ಷ** – 1. ಅಂಕಿತಾಶ್ರೀ 2. ದೇವಾಂಶ ಎ. ಆರ್. 3. ಆದೀಶ್; **16 ರಿಂದ 50 ವರ್ಷ** 1. ಯಶಶ್ ರಾವ್ 2. ನೇತ್ರ 3. ರೋಹಿಣಿ ವಿಕ್ರಂ; **51 ವರ್ಷದ ಮೇಲ್ಪಟ್ಟು** 1. ಪೂರ್ಣಿಮಾ 2. ಹರಿಣಿ ಕುಮಾರಿ 3. ಭುವನೇಶ್ವರಿ ● **ಚಿತ್ರ ಬಿಡಿಸುವ ಸ್ಪರ್ಧೆ : 1ರಿಂದ 5ನೇ ತರಗತಿ** 1. ಆದೀಶ್ 2. ಆನ್ವಿತಾ ಎಸ್. 3. ಆಧ್ಯ; **6ರಿಂದ 10 ನೇ ತರಗತಿ** 1. ಅಂಕಿತಾಶ್ರೀ 2. ಪ್ರತೀಕ್ 3. ಗೌರೀಶ್ ● **ಹುಲಿ ಕುಣಿತ ಮಹಿಳಾ ವಿಭಾಗ** 1. ರತ್ನಾ ರಾಜೇಂದ್ರ 2. ನಿಶ್ಮಿತಾ 3. ಕುಸುಮಾ ನವೀನ್; **ಮಕ್ಕಳ ವಿಭಾಗ** 1. ಅಂಕಿತಾ – **ಪುರುಷರ ವಿಭಾಗ** 1. ಸೌರವ್ 2. ಶ್ರೀಕಾಂತ್



ಸ್ಥಾನಿಕ ಬ್ರಾಹ್ಮಣ ಸಮಾಜದ ವೈದಿಕರಾಗಿರುವ ವೇದಮೂರ್ತಿ ಶ್ರೀ ಲಕ್ಷ್ಮೀನಾರಾಯಣ ಹೆಬ್ಬಾರ್ ಇವರ ಧರ್ಮಪತ್ನಿಯ ವೈದ್ಯಕೀಯ ಚಿಕಿತ್ಸೆಗಾಗಿ ರೂ 10,000/–ವನ್ನು ಶ್ರೀ ಕೆ. ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ದಂಪತಿಗಳು ನೀಡಿದರು.

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

## ಪುತ್ತೂರು 'ಶಿವಸದನ' ವಸತಿನಿಲಯದಲ್ಲಿ ಹುಟ್ಟುಹಬ್ಬ ಆಚರಣೆ



ಬೆಂಗಳೂರು ನಿವಾಸಿ ಶ್ರೀ ಅರುಣ್ ರಾವ್, ಪತ್ನಿ ಶ್ರೀಮತಿ ಆಶಾ ಅರುಣ್ ರಾವ್, ಪುತ್ರ ಶ್ರೀ ಅರವಿಂದ ರಾವ್ ಮತ್ತು ಮೊಮ್ಮಕ್ಕಳು ಪುತ್ತೂರಿನ ಶಿವಸದನದ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯದಲ್ಲಿ ಸೊಸೆ ಶ್ರೀಮತಿ ಮಾನ್ಸಿ ಅರವಿಂದ್ ಇವರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಭೋಜನ ಏರ್ಪಡಿಸಿದ್ದರು. ಶ್ರೀ ದಿನಕರ್ ರಾವ್, ವಾಣಿ ದಂಪತಿಗಳು, ಶ್ರೀಮತಿ ಶಕುಂತಲಾ ವಿಜಯ್ ಕುಮಾರ್ ಮತ್ತು ಅಲ್ಲಿನ ಸಿಬ್ಬಂದಿ ವರ್ಗದವರೆಲ್ಲ ಸಹಕರಿಸಿದರು. ಶ್ರೀಮತಿ ಮಾನ್ಸಿಯವರಿಗೆ ಹಿರಿಯರೆಲ್ಲರೂ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದರು.

ಆ ಸಮಯದಲ್ಲಿ ಹಿರಿಯರಿಗೆ ಸಣ್ಣ ಸಣ್ಣ ಆಟ, ಹಾಡು ಹಾಡಿಸಿ, ಕುಣಿತ ಭಜನೆ ಮಾಡಿಸಿ ಸಂಭ್ರಮಿಸಿದರು ಹೀಗೇ ಎಲ್ಲರೂ ಹಿರಿಯರೊಂದಿಗೆ ಆಚರಿಸಿ ಸಂಭ್ರಮಿಸೋಣ.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

---




ಮಂಗಳೂರಿನ ವ್ಯಾಸನಗರ ನಿವಾಸಿ ಶ್ರೀಮತಿ ಶಕುಂತಲಾ ವಿಜಯ ಕುಮಾರ್ ರಾವ್ ಬೈರಿಕಟ್ಟೆ. ಇಂದು ಶಿವಸದನಕ್ಕೆ ಬಂದು ವಿಶೇಷ ಚೇತನರ ಶಾಲೆಯ ಮಕ್ಕಳಿಗೆ ಪೆನ್ಸಿಲ್, ರಬ್ಬರ್, ಸ್ಲೇಟ್, ಕಡ್ಡಿಗಳ ಡಬ್ಬ, ಕವರ್ ತಯಾರು ಮಾಡಲು ಹಳೆಯ ಪೇಪರ್, ಕನ್ನಡ–ಇಂಗ್ಲಿಷ್ ಪ್ರಿಂಟೆಡ್ ಚಾರ್ಟ್, ಕಾಗುಣಿತ ಚಾರ್ಟ್, ಇಂಡಿಯಾ ಮತ್ತು ಕರ್ನಾಟಕ ಮ್ಯಾಪ್ ಹಾಗೂ ಎಲ್ಲಾ ಮಕ್ಕಳಿಗೆ ಬಿಸ್ಕಿಟ್‌ಗಳನ್ನು ಪ್ರೀತಿಯಿಂದ ತಂದು ನೀಡಿದರು. ಸೇವಾಮನೋಭಾವ ತುಂಬಿದ ಶಕುಂತಲಾ ರಾವ್ ಸ್ವತಃ ಆಗಾಗ ಶಿವಸದನಕ್ಕೆ ಬಂದು ಭೇಟಿ ನೀಡಿ ಹಿರಿಯರೊಂದಿಗೆ ಸ್ಪಂದಿಸಿ ಪ್ರೀತಿಯಿಂದ ಬೆರೆಯುವ ಗುಣಹೊಂದಿರುವವರು. ಇನ್ನು ಮುಂದೆಯೂ ಉತ್ತಮ ಸಹಕಾರ ನೀಡುವ ಭರವಸೆ ನೀಡಿರುವರು. ಶಿವಸದನದ ಎಲ್ಲಾ ಹಿರಿಯರ ಪರವಾಗಿ ಧನ್ಯವಾದಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com


PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ತೆಂಕಿಲ ಕುಟುಂಬಕ್ಕೆ (ಕೆಳಗಿನ ತೆಂಕಿಲ ಕವಲು) ಸೇರಿದ ಮಂಗಳೂರು ನಿವಾಸಿ **ತೆಂಕಿಲ ಪ್ರಭಾಕರ ರಾವ್** (88 ವರ್ಷ) ಅವರು ತಾ. 20–10–2024ನೇ ರವಿವಾರ ದೈವಾಧೀನರಾಗಿದ್ದಾರೆ. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಮಡಿಯಾಳ ಶ್ರೀ ವಿಷ್ಣು ರಾವ್** (71) ತಾ. 16–10–2024ನೇ ಬುಧವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಇವರು ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

***



**ಶ್ರೀಮತಿ ಶಾರದಾ ಶ್ರೀನಿವಾಸ ರಾವ್ ಬಜಗೋಳಿ** (92) ತಾ. 9–10–2024ನೇ ಬುಧವಾರ ನಿಧನರಾದರು. ಇವರು ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



ಕಂಬದಕೋಣೆ **ಶ್ರೀಮತಿ ಸಾವಿತ್ರಿ ಕೆ. ರಾವ್** (71) ತಾ. 9–10–2024ನೇ ಬುಧವಾರ ನಿಧನರಾದರು. ಅವರು ಪತಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

***



**ಶ್ರೀ ರಾಮಚಂದ್ರ ಬಾಬು ಶಾನುಭಾಗ್** (67) ಇವರು ಹೃದಯಾಘಾತದಿಂದ ತಾ. 13–10–2024ನೇ ರವಿವಾರ ನಿಧನ ಹೊಂದಿದರು. ಮೂಲತಃ ಕುಮಟಾದವರಾದ ಇವರು ಮುಂಬೈಯಲ್ಲಿ 40 ವರ್ಷಗಳಿಂದ ಪ್ರಿಂಟಿಂಗ್ ಪ್ರೆಸ್ ವ್ಯವಹಾರ ನಡೆಸಿಕೊಂಡು ಬಂದಿದ್ದು ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

***



**ಕೆಮಣ್ಣು ಅಣ್ಣಾಜಿ ರಾವ್** (86) ತಾ. 13–10–2024ನೇ ರವಿವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು.

***



**ಬೊಕ್ಕಸ ಶ್ರೀ ಗಣೇಶ್ ರಾವ್** ತಾ. 12–10–2024ನೇ ಶನಿವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Muralidhara Rao Adyapadi
Proprietor
Mob : 94480 27259
99803 16434
SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಕೀರ್ತಿಶೇಷ ಶ್ರೀ ಸೀತಾರಾಮಯ್ಯ ಮತ್ತು ಶ್ರೀಮತಿ ಚಂದ್ರಮ್ಮ ಇವರ ಸ್ಮರಣಾರ್ಥ ಅವರ ಮಗಳು ಶ್ರೀಮತಿ ಶ್ಯಾಮಲ ಸೂರ್ಯಪ್ರಕಾಶ್ ತನ್ನ ಮಕ್ಕಳು ಮತ್ತು ಸೊಸೆಯಂದಿರಾದ ಶ್ರೀ ಪ್ರಶಾಂತ್ ರಾವ್ – ಶ್ರೀಮತಿ ಸೌಮ್ಯ, ಶ್ರೀ ನಿಶಾಂತ್ ರಾವ್ – ಶ್ರೀಮತಿ ಗೀತಾ ರಾವ್ ಜತೆಗೂಡಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿ ನಿಲಯ 'ಶಿವಸದನ'ಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.


Land Trades®
BUILDERS & DEVELOPERS

*Experience the joy of moving into tranquil abodes*

CELEBRATING 33rd ANNIVESARY

KADRI, MANGALURU



**KRISHNA KUTEERA**
KADRI KAMBLA ROAD, KADRI
3 & 4 BHK

**LAXMI GOVIND**
ALVARES ROAD, KADRI
2 & 3 BHK

*A community of exclusive Limited Edition Apartments*

For more details please contact

**8882 777 444**
98807 42159 | 98450 84866 | 96115 31026
www.landtrades.in

OFFICE :
MILESTONE25", 5TH FLOOR,
COLLECTORS GATE JUNCTION,
BALMATTA, MANGALORE 575001
PHONE +91 824 2425424


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur
*Printed at :* Rajesh Power Press, Darbe - 574 202, Puttur, D. K.